ಶ್ರೀ ಎಂ. ನಾರಾಯಣ ಸ್ವಾಮಿ:- ಇದೊಂದು ಪರಿಪಾಠವಾಗಿಬಿಟ್ಟಿದೆ. ನಮಗೂ ಅವಕಾಶ ಕೊಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನು ಯಾವಾಗ ಕರೆಯುತ್ತೀರಿ?

ಉಪಾಧ್ಯಕ್ಷರು:- ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಲಾಗಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರೇ, ತಾವು ಪ್ರಸ್ತಾಪ ಮಾಡಿ. ವಿಷಯ ಮುಕ್ತಾಯ ಮಾಡಿದ ಮೇಲೆ ತಾವೇನು ಹೇಳುತ್ತೀರಿ. ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ನಾನು ಕರೆದಿದ್ದೇನೆ ಅವರು ಪ್ರಸ್ತಾಪ ಮಾಡಲಿ. ಅವರೂ ಮುಗಿದ ಕೂಡಲೇ ತಮ್ಮನ್ನು ಕರೆಯುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಅ) ದೊಡ್ಡ ಬಳ್ಳಾಪುರದಲ್ಲಿ ಇನ್‌ಕಂಟ್ಯಾಕ್ಸ್ ಅಧಿಕಾರಿಗಳಿಗೆ ವರ್ತಕರಿಂದ ಅವಮಾನ.

+ಶ್ರೀಮತಿ ಪ್ರಮಿಳಾ ನೇಸರ್ಗಿ(ಚಾಮರಾಜಪೇಟೆ):- ನಿನ್ನೆ ದಿವಸ ದೊಡ್ಡಬಳ್ಳಾಪುರದಲ್ಲಿ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಹೋಗಿ ವರ್ತಕರ ಮನೆಗೆ ಹೋದಂತಹ ಸಂದರ್ಭದಲ್ಲಿ ಹತ್ತು ಜನ ಹೆಣ್ಣು ಮಕ್ಕಳು ಕೂಡ ಜೊತೆಯಲ್ಲಿ ಹೋಗಿದ್ದರೆಂದು ಕೇಳಲ್ಪಟ್ಟಿದ್ದೇನೆ. ಹೋದ ನಂತರ ಅವರಿಗೆ ಅವಮಾನ ಮಾಡಿ ಹೊರಗೆ ಬರತಕ್ಕಂತಹ ಸಂದರ್ಭದಲ್ಲಿ ಅವರ ಮುಖದ ಮೇಲೆ ಉಗುಳಿರ-ತಕ್ಕಂತಹ ಪರಿಸ್ಥಿತಿಯನ್ನು ನಾವು ಓದಿದ್ದೇವೆ. ಬಹಳ ದುಃಖಕರವಾದ ವಿಷಯ. ಇವತ್ತು ಹೆಣ್ಣು ಮಕ್ಕಳು ಸರ್ಕಾರದಲ್ಲಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರು ಕೆಲಸ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಅಧಿಕಾರಿಗಳ ಜೊತೆ ಇಂಥ ಸಂದರ್ಭದಲ್ಲಿ ಹೋದಾಗ ಇವರಿಗೆ ಈ ರೀತಿ ಅವಮಾನ ಮಾಡಿದಾಗ ಅಲ್ಲಿಯೇ ಪೋಲೀಸರು ಸಹ ಇದ್ದರು ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಕಾನೂನು ಮತ್ತು ಸುವ್ಯವಸ್ಥೆಯೇನಾದರೂ ಈ ರಾಜ್ಯದಲ್ಲಿದೆಯೇ ಎನ್ನುವ ಪ್ರಶ್ನೆಯನ್ನು ನಾನು ಇವತ್ತು ಮಾಡ-ಬೇಕಾಗಿದೆ. ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಲಾರದ ಪೋಲೀಸರು ಓಡಿಹೋದರು ಎಂದರೆ ಎಂಥ ಪೋಲೀಸರನ್ನು ನಾವು ರೆಕ್ರೂಟ್ ಮಾಡಿಕೊಂಡಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಆದಕಾರಣ ಸನ್ಮಾನ್ಯ ಸಂಬಂಧಪಟ್ಟ ಮಂತ್ರಿಗಳಲ್ಲಿ ಗೃಹ ಸಚಿವರಲ್ಲಿ ಹಾಗೂ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯವನ್ನು ಇವತ್ತು ತಾವು ತಿಳಿಸಬೇಕಾಗಿದೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಹೆಣ್ಣು ಮಕ್ಕಳು ಅಧಿಕಾರಿಗಳಾಗಿದ್ದಾರೆ. ಅವರುಗಳು ಹೋಗಿ ಕೆಲಸ ಮಾಡುವ ಸಂದರ್ಭದಲ್ಲಿ ಅವ-ರಿಂದ ಆಭರಣವನ್ನು ಕಿತ್ತು ಕೊಂಡಿದ್ದಾರೆ. ಮೈಮೇಲೆ ಉಗುಳಿದ್ದಾರೆ. ಇದು ನಮಗೆ ಬಹಳ ದುಃಖ-ವಾಗುತ್ತದೆ. ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಎಂದು ಕೇಳಿದ್ದೇನೆ. ಹೆಣ್ಣುಮಕ್ಕಳಿಗೆ ರಕ್ಷಣೆ